ಹುಡುಕಿದರೂ ಎಲ್ಲೂ ಸಿಗಲಿಲ್ಲ. ಕೊನೆಗೆ ಜೋಯಿಸರು ಮತ್ತು ಆನಂದಪ್ಪ ಆ ಕೊಠಡಿಯ ಸಜ್ಜೆಯಲ್ಲಿದ್ದ ಶ್ರೀನಿವಾಸರಾಯರ ಹಳೆಯ ಕಬ್ಬಿಣದ ಟ್ರಂಕನ್ನು ನಿಧಾನವಾಗಿ ಕೆಳಗೆ ಇಳಿಸಿದರು. ಶಿವರಾಮನು ಬಹುಪಾಲು ಸಮಯವನ್ನು ಆ ಕೊಠಡಿಯಲ್ಲಿ ಪುಸ್ತಕ ಓದುವುದರಲ್ಲಿಯೋ ಇಲ್ಲವೇ ಅವರೊಂದಿಗೆ ಚರ್ಚೆಗಳನ್ನು ಮಾಡುತ್ತಲೋ ಇರುತ್ತಿದ್ದುದರಿಂದ ಆ ಕೊಠಡಿಯ ವಸ್ತುಗಳ ಪರಿಚಯ ತಕ್ಕಮಟ್ಟಿಗೆ ಇತ್ತು. ಹಾಗಾಗಿ ಹಳೆಯ ಕಬ್ಬಿಣದ ಟ್ರಂಕಿಗೆ ಹಾಕಲಾದ ಬೀಗವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಏಕೆಂದರೆ ಆ ಕೊಠಡಿಗಾಗಲೀ ಅಥವಾ ಟ್ರಂಕಿಗಾಗಲೀ ಶ್ರೀನಿವಾಸರಾಯರು ಎಂದೂ ಬೀಗ ಹಾಕುತ್ತಿರಲಿಲ್ಲ. ತಮ್ಮ ಸಾರ್ವಜನಿಕ ಜೀವನದಂತೆ ಖಾಸಗಿ ಜೀವನವೂ ಕೂಡ ಪಾರದರ್ಶಕವಾಗಿರಬೇಕು ಎಂಬ ತತ್ವವನ್ನು ಪಾಲಿಸುತ್ತಿದ್ದ ಶ್ರೀನಿವಾಸರಾಯರ ಟ್ರಂಕಿಗೆ ಹಾಕಿರುವ ಬೀಗವನ್ನು ನೋಡಿ ಶಿವರಾಮನಿಗೆ ನಗು ಬಂತು. ಏಕೆಂದರೆ ಅಂತಹ ಬೆಲೆಬಾಳುವ ಯಾವ ವಸ್ತುವೂ ಅವರ ಕೊಠಡಿಯಲ್ಲಿ ಇರಲಿಲ್ಲ.

ಬೀಗದ ಕೀ ಅಲ್ಲೆಲ್ಲೂ ಸಿಗದೆ, ಬೀಗವನ್ನು ಒಡೆದು ಟ್ರಂಕನ್ನು ತೆರೆಯಲಾಯಿತು. ಕಬ್ಬಿಣದ ಟ್ರಂಕಿನೊಳಗಿನ ದೃಶ್ಯ ಕಂಡು ಶಿವರಾಮನು ನಿಜಕ್ಕೂ ಹೌಹಾರಿ, ತನ್ನ ಕಣ್ಣುಗಳನ್ನು ತಾನೇ ನಂಬದಾದ. ಅವನ ಜೊತೆ ಬಂದಿದ್ದ ಎಲ್ಲರೂ ಕೂಡ ಬೆಕ್ಕಸಬೆರಗಾಗಿ ನಿಂತಿದ್ದರು. ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರ, ಅವಿವಾಹಿತ, ಪಾನ ವಿರೋಧಿ, ಶ್ರೀನಿವಾಸರಾಯರ ಕಬ್ಬಿಣದ ಟ್ರಂಕಿನಲ್ಲಿ ಒಂದು ಸ್ಕಾಚ್ ವಿಸ್ಕಿಯ ಬಾಟಲ್ ಕಂಡು ನಂಬಲಿಕ್ಕಾಗದೆ ಎಲ್ಲರೂ ಮೌನವಾಗಿ ನಿಂತಿದ್ದರು. ಅದೇ ಟ್ರಂಕಿನ ಮೂಲೆಯಲ್ಲಿ ಟೈಪ್ ಮಾಡಲಾಗಿದ್ದ ಎರಡು ಪೇಪರ್ ಕೂಡ ಸಿಕ್ಕವು. ಆ ಪೇಪರ್‌ನಲ್ಲಿ 'ನನ್ನ ನಾ ಕಂಡಂತೆ' ಎಂಬ ಶೀರ್ಷಿಕೆಯಿತ್ತು. ಇದು ಶ್ರೀನಿವಾಸರಾಯರ ಆತ್ಮಚರಿತ್ರೆಯ ಪುಟ ಎಂಬುದು ತಕ್ಷಣ ಶಿವರಾಮನಿಗೆ ಗೊತ್ತಾಯಿತು. ಏಕೆಂದರೆ ಶ್ರೀನಿವಾಸರಾಯರು ತಮ್ಮ ಆತ್ಮಚರಿತ್ರೆಯನ್ನು ಓದಿ, ತಿದ್ದುಪಡಿ ಮಾಡಲು ಶಿವರಾಮನಿಗೆ ಕೊಟ್ಟಿದ್ದರು. ಅವನು ಅದನ್ನು ಓದಿ, ಪ್ರೂಫ್ ರೀಡಿಂಗ್ ಎಲ್ಲಾ ಮುಗಿಸಿ, ಪುಸ್ತಕ ಮುದ್ರಣ ಮಾಡಲು ಕೊಟ್ಟು ಎರಡು ತಿಂಗಳಾಗಿತ್ತು. ಇನ್ನೂ ಪುಸ್ತಕ ಬಿಡುಗಡೆಯಾಗಿರಲಿಲ್ಲ. ಅಷ್ಟರಲ್ಲೇ ಶ್ರೀನಿವಾಸರಾಯರು ಹೃದಯಾಘಾತಕ್ಕೆ ತುತ್ತಾಗಿ, ಮರಣ ಹೊಂದಿದ್ದರು. ಆದರೆ, ಈ ಪುಟಗಳನ್ನು ನಾನು ನೋಡಿಯೇ ಇರಲಿಲ್ಲವಲ್ಲ ಎಂದುಕೊಂಡ ಶಿವರಾಮನು ಆ ಪುಟದಲ್ಲಿ ಬರೆದಿದ್ದನ್ನು ಜೋರಾಗಿ ಓದತೊಡಗಿದ: 'ನನ್ನ ಬ್ರಹ್ಮಚರ್ಯ ಜೀವನಕ್ಕೆ ಆಕೆ ನಿಜಕ್ಕೂ ಸವಾಲಾದಳು. ನಾನು ಆಕೆಯನ್ನು ನೋಡಿದ ದಿನದಿಂದಲೇ ಆಕೆಗೆ ಸೋತು ಹೋಗಿದ್ದೆ. ಆಕೆಯ ಸೌಂದರ್ಯದ ಮುಂದೆ ನನ್ನ ಎಲ್ಲಾ ಸಾಧನೆಗಳೂ ಶೂನ್ಯ ಎಂಬುದು ನನಗೆ ಮನದಟ್ಟಾಯಿತು. ಆಕೆಗೂ ನನ್ನ ಮೇಲೆ ಮನಸ್ಸಿದೆ ಎಂದು ಕ್ರಮೇಣ ಗೊತ್ತಾಯಿತು. ಆಕೆ ವಿಧವೆಯಾದ್ದರಿಂದ ಮತ್ತು ನನ್ನ ಕೊಠಡಿಗೆ ಆಗಾಗ್ಗೆ ಬರುತ್ತಿದ್ದುದರಿಂದ ನಮಗೆ ಯಾವುದೇ ತಡೆಗೋಡೆಗಳಿರಲಿಲ್ಲ. ನಮ್ಮಿಬ್ಬರ ದೈಹಿಕ ಇಚ್ಛೆಗಳ ವಿರುದ್ಧ ಮನೋನಿಗ್ರಹ ಕೆಲಸ ಮಾಡಲಿಲ್ಲ. ಪ್ರೀತಿಯ ಕಡಲಲ್ಲಿ ಆಳಕ್ಕೆ ಮುಳುಗಿ, ಮನಸೋ ಇಚ್ಛೆ ಈಜಿ, ಸುಖಿಸಿದೆವು.....' ಇನ್ನು ಮುಂದಿನ ಸಾಲುಗಳನ್ನು ಓದಲಾಗದೇ ಶಿವರಾಮನು ಅಷ್ಟಕ್ಕೆ ನಿಲ್ಲಿಸಿದ.



ಆನಂದಪ್ಪನು, ಭೋ ಏನ್ರೀ ಈ ಮುದುಕ ತನ್ನ ಕಾಮಕೇಳಿಯನ್ನು ಇಷ್ಟು ರಾಜಾರೋಷವಾಗಿ ಬರೆದಿದ್ದಾನೆ. ಆ ಸರೋಜಮ್ಮಳೊಂದಿಗೆ ಸಂಬಂಧವಿತ್ತು ಎಂದು ನಾವೆಲ್ಲಾ ಹೇಳಿದರೂ ಆ ದಿನ ನಮ್ಮ ಮಾತು ಯಾರೂ ನಂಬಿರಲಿಲ್ಲ. ಈಗ ನೋಡಿ ಅವರೇ ನಿಜವನ್ನು ಬರೆದಿದ್ದಾರೆ. ಎಷ್ಟೇ ಆಗಲಿ ಗಾಂಧೀಜಿಯ ಅನುಯಾಯಿಯಲ್ಲವೇ? ಯಾವುದನ್ನೂ ಮುಚ್ಚಿಡಲಾರರು' ಎಂದನು ವ್ಯಂಗ್ಯವಾಗಿ.

'ಬಾಯಲ್ಲಿ ಹೇಳುವುದು ಪಾನನಿರೋಧ, ಆದರೆ ಟ್ರಂಕಲ್ಲಿ ಸ್ಕಾಚ್ ವಿಸ್ಕಿಯ ಬಾಟಲು, ಎಲ್ಲರಿಗೂ ಆತ್ಮನಿಗ್ರಹ, ಬ್ರಹ್ಮಚರ್ಯ ಎಂದು ಬೋಧನೆ ಮಾಡುವುದು. ಆದರೆ, ತಾನು ಮಾತ್ರ ಕಚ್ಚೆಹರುಕ' ಎಂದು ಜೋಯಿಸರು ಮಾಡಿದ ಕೀಳುಮಟ್ಟದ ಜೋಕಿಗೆ ಆ ಕೊಠಡಿಯಲ್ಲಿದ್ದ ಎಲ್ಲರೂ ನಗತೊಡಗಿದರು. ಶಿವರಾಮನಿಗೆ ಅಲ್ಲಿ ಒಂದು ಕ್ಷಣವೂ ನಿಲ್ಲಲಾಗಲಿಲ್ಲ. ಭರಭರನೆ ಹೊರಗೆ ಹೊರಟುಹೋದ.

ಗಾಂಧೀವಾದಿ ಶ್ರೀನಿವಾಸರಾಯರ ಟ್ರಂಕಿನಲ್ಲಿ ಸ್ಕಾಚ್‌ವಿಸ್ಕಿಯ ಬಾಟಲು ದೊರೆತಿದ್ದು ಹಾಗೂ ತಮ್ಮ ಅನೈತಿಕ ಸಂಬಂಧದ ಬಗ್ಗೆ